**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಕಡೂರು**

**ಅಸಲು ದಾವಾ ಸಂಖ್ಯೆ 12/2017**

**D .W.-2.**

ದಿನಾಂಕಃ 18-04-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು ಃ- ವಾದಿ ಪರವಾಗಿ ಶ್ರೀ ಎಂ ಓ ಜೆ ವಕೀಲರಿಂದಃ-**

ಈ ದಾವೆಯನ್ನು ಯಾರು ಯಾರ ವಿರುದ್ದ ಮತ್ತು ಯಾವ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂಬ ವಿಚಾರವು ನನಗೆ ಗೊತ್ತು. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯು ವಾದಿಗೆ ಕ್ರಯಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ದಿಃ 20-05-1980 ರಂದು ವಾದಿಗೆ ಆನಂದಪ್ಪ ಬಿನ್ ಗವಿರಂಗಪ್ಪ ಎಂಬುವವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಸದರಿ ಕ್ರಯಪತ್ರದ ಆಧಾರದ ಮೇಲೆ ವಾದಿಗೆ ದಾವಾ ಆಸ್ತಿಯ ಖಾತೆಯು ಬದಲಾವಣೆಯಾಗಿರುತ್ತದೆ ಎಂದರೆ ಸರಿ .

ಪ್ರತಿವಾದಿಗೆ ದಾವಾ ಆಸ್ತಿಯ ಕುರಿತು ಯಾವುದೇ ಹಕ್ಕು , ಅಧಿಕಾರ ಮತ್ತು ಸ್ವಾಧೀನತೆ ಇರುವುದಿಲ್ಲವೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೇಳುವುದೇನೆಂದರೆ ಪ್ರತಿವಾದಿಯು ಸುಮಾರು 40 ವರ್ಷಗಳಿಂದ ದಾವಾ ಆಸ್ತಿಯಲ್ಲಿ ಸ್ವಾಧೀನತೆಯಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯು ಸ್ವಾಧೀನಾನುಭವದಲ್ಲಿರುವ ಆಸ್ತಿಯ ನಂಬರ್ ನನಗೆ ಗೂತ್ತಿಲ್ಲ. ಪ್ರತಿವಾದಿಗೆ ಗ್ರಾಮ ಪಂಚಾಯಿತಿಯವರು ಏನಾದರೂ ಪ್ರತಿವಾದಿಯ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಪತ್ರ ಏನಾದರೂ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಒಂದು ಆಸ್ತಿಯಲ್ಲಿ ಮನೆಯನ್ನು ನಿರ್ಮಾಣ ಮಾಡಬೇಕಾದರೆ ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆಯಬೇಕಾಗುತ್ತದೆ ಎಂದರೆ ಸರಿ . ಪ್ರತಿವಾದಿಯ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ಪಂಚಾಯಿತಿಯವರು ಪ್ರತಿವಾದಿಯ ಆಸ್ತಿಯನ್ನು ಅಳತೆ ಮಾಡುವ ಸಮಯದಲ್ಲಿ ನನ್ನಿಂದ ಯಾವುದೇ ದಾಖಲಾತಿಗೆ ಸಹಿಯನ್ನು ಪಡೆದಿರುವುದಿಲ್ಲ.ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಅಳತೆ ಮಾಡಬೇಕಾದರೆ ಅಳತೆ ಮಾಡಬೇಕಾದ ಆಸ್ತಿಯು ಅಳತೆ ಮಾಡಿಸಬೇಕೆಂದು ಕೋರಿರುವ ವ್ಯಕ್ತಿಯ ಹೆಸರಿಗಿದ್ದರೆ ಮಾತ್ರ ಅಳತೆ ಮಾಡುತ್ತಾರೆ ಎಂದರೆ ಸರಿ . ಪ್ರತಿವಾದಿಯು ವಾದಿಗೆ ಸಂಬಂಧಿಸಿದ ದಾವಾ ಬಿ ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡಿ ಶೆಡ್ಡನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಆಸ್ತಿಯ ದಕ್ಷಿಣ ದಿಕ್ಕಿಗೆ ನನ್ನ ಮನೆ ಇತ್ತು ಆದರೆ ಈಗ ಸದರಿ ಮನೆಯನ್ನು ನಾನು ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ. ನನಗೆ ನನ್ನ ಮನೆಯ ಅಸೆಸ್ಮೆಂಟ್ ನಂ. ನೆನಪಿಲ್ಲ.

ನಾನು ಮತ್ತು ಪ್ರತಿವಾದಿ ಒಂದೇ ಜಾತಿಗೆ ಸೇರಿರುತ್ತೇನೆ. ನಾನು ಮತ್ತು ವಾದಿಯು ಸಹ ಒಂದೇ ಜಾತಿಗೆ ಸೇರಿದವರಾಗಿರುತ್ತೇವೆ. ಪ್ರತಿವಾದಿಯು ದಾವಾ ಬಿ ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡದೇ ಹನುಮಣ್ಣನ ಸ್ವತ್ತಿನಲ್ಲಿ ಶೆಡ್ಡನ್ನು ಹಾಕಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯು ವಿಶ್ವಾಸದಿಂದ ಇರುವ ಕಾರಣದಿಂದ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರ ಸರಿಯಲ್ಲ. ಪ್ರತಿವಾದಿಯು ಸುಮಾರು 40 ವರ್ಷಗಳಿಂದ ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಈರಪ್ಪ ಢವಳೇಶ್ವರ್)
**೨ ನೇ ಹೆ.ಪ್ರ:ದ:ನ್ಯಾ:ದಂ.ರವರು, ಕಡೂರು.**